ಎಲ್ಲಾ ಮಾವನವರಿಗಿಂದ ಶ್ರೀಪತಿ ಮಾವನ ಜೊತೆ ಹೆಚ್ಚು ಪ್ರೀತಿ, ಒಡನಾಟವಿತ್ತು.

ಶ್ರೀಪತಿ ಮಾವ ಹೊಲಗದ್ದೆಗಳನ್ನೆಲ್ಲಾ ಚೆನ್ನಾಗಿ ನೋಡಿಕೊಂಡು ಫಲವತ್ತಾದ ತರಕಾರಿ, ಗಿಡಗಳನ್ನು ಬೆಳೆಸಿ ಅತ್ಯುತ್ತಮ ತೋಟಗಾರಿಕೆ ಮಾಡಿದ್ದರು. ಬೇಡ ಅನಿಸಿದ ಗದ್ದೆಗಳಲ್ಲಿ ಅಡಿಕೆ ಮರದ ತೋಟವನ್ನು ಆರಂಭಿಸಿದ್ದರು. ಕೆರೆಗೆ ಬೋರ್‌ವೆಲ್ ತೋಡಿಸಿದ್ದರು. ಅದೇ ಕೆರೆಯಲ್ಲಿ ಶಾಲಾ ದಿನಗಳಲ್ಲಿ ಅರವಿಂದ ಈಜಲು ಕಲಿತಿದ್ದ.

ಊರಿಗೆ ಬಂದವನಿಗೆ ಈ ಬಾರಿ ಅಜ್ಜಿ ಮನೆಗೆ ಹೋಗಲು ಅಮ್ಮನ ಒತ್ತಾಯವೇ ಕಾರಣ. ಮೊನ್ನೆ ಮನೆಗೆ ಬಂದಿದ್ದ ಮಾವ ಅಮ್ಮನಲ್ಲಿ ಹೇಳಿದ್ದರಂತೆ...'ಅರವಿಂದ ಬಂದರೆ ಈ ಬಾರಿ ತಪ್ಪದೇ ಕಿನ್ನಿಗೋಳಿಗೆ ಹೋಗಿ ಬಾ ಅನ್ನು. ನನಗೆ ಅವನಲ್ಲಿ ಸ್ವಲ್ಪ ಮಾತನಾಡುವುದಿದೆ' ಅಂದಿದ್ದರಂತೆ. ಈ ಬಾರಿ ಪ್ರಿಯಾಂಕಾಳನ್ನು ಅಲ್ಲಿಗೆ ಕರೆದುಕೊಂಡು ಹೋಗಲಿಲ್ಲ ಅರವಿಂದ. ಹಿಂದಿನ ಸಲ ಅಜ್ಜಿ ಮನೆಗೆ ಇಬ್ಬರೂ ಬಂದಿದ್ದರು. ಪ್ರಿಯಾಂಕಾ ರಿಕ್ಷಾದಲ್ಲಿ ಹೋಗೋಣವೆಂದರೂ ಅರವಿಂದ ಬಸ್‌ನಲ್ಲಿ ಕರೆದೊಯ್ದು ಮಡದಿಯ ಮುನಿಸಿಗೆ ಗುರಿಯಾಗಿದ್ದ. ಕಿನ್ನಿಗೋಳಿಯಲ್ಲಿ ಬಸ್ ಇಳಿದ ಬಳಿಕವೂ ಸುಮಾರು ಏರುತಗ್ಗಿನಲ್ಲಿ ನಡೆಯೋದಿತ್ತು. ಅಲ್ಲದೇ ಗುಡ್ಡದ ಕೆಳಗಡೆ ಇಳಿಯಬೇಕು ಅರವಿಂದನ ಅಜ್ಜಿಯ ಮನೆಗೆ. ಪ್ರಿಯಾಂಕಾ ಅಲ್ಲಿನ ರಮಣೀಯ ಪ್ರಕೃತಿ ಸೌಂದರ್ಯಕ್ಕೆ ಮಾರು ಹೋಗಿದ್ದರೂ ತುಂಬಾ ನಡೆದು ಸುಸ್ತಾಗಿ 'ಅಬ್ಬಾ! ಎಂತಹ ತಗ್ಗಿನಲ್ಲಿದೆ ನಿಮ್ಮ ಅಜ್ಜಿಮನೆ. ನನಗೆ ಇಂತಹ ಜಾಗದಲ್ಲೆಲ್ಲಾ ನಡೆದು ಅಭ್ಯಾಸವೇ ಇಲ್ಲ. ಇಲ್ಲಿಯ ತನಕವೂ ಆಟೋದಲ್ಲೇ ಬರಬಹುದಿತ್ತಲ್ಲಾ? ಇನ್ನೊಮ್ಮೆ ಖಂಡಿತಾ ಇತ್ತ ಬರಲಾರೆ' ಎಂದು ತುಸು ಸಿಟ್ಟಿನಿಂದಲೇ ತಿಳಿಸಿದ್ದಳು. ಅರವಿಂದನಿಗೂ ಆ ಕ್ಷಣಕ್ಕೆ ಇವಳನ್ನು ರಿಕ್ಷಾದಲ್ಲೇ ಕರೆತರಬಹುದಿತ್ತೆಂದು ಅನ್ನಿಸಿ ಕಸಿವಿಸಿಗೊಂಡಿದ್ದ. ಈ ಸಲ ಮತ್ತೆ ಕಿರಿಕಿರಿ ಬೇಡ ಎಂದು ಮೋಹನನ ಜೊತೆ ಬೈಕ್‌ನಲ್ಲಿ ಒಬ್ಬನೇ ಹೊರಟಿದ್ದ. ಮೋಹನ ಇನ್ನೊಬ್ಬ ಮಾವ ಶ್ರೀಕಾಂತ್‌ರ ಕಿರಿಯ ಮಗ. ಆತ ಮಂಗಳೂರಲ್ಲಿ ಬಾಡಿಗೆ ಮನೆಯಲ್ಲಿದ್ದಾನೆ.

'ತೋಟ ಸುತ್ತಾಡಿಯೇ ಮನೆಗೆ ಹೋಗೋಣ' ಎಂದು ಅರವಿಂದ ಮೋಹನನಿಗೆ ತೋಟದ ದಾರಿಯಲ್ಲೇ ಬೈಕ್ ನಿಲ್ಲಿಸಲು ಹೇಳಿದ. ಪೇರಳೆ ಹಣ್ಣಿನ ಮರ ಧಾರಾಳ ಇತ್ತು. ಅಲ್ಲಲ್ಲಿ ತರಕಾರಿಗಳು ಬೆಳೆದಿತ್ತು. ಕೆಲವನ್ನು ಕೊಯ್ದುಕೊಂಡ. ಪೇರಳೆ ಹಣ್ಣುಗಳನ್ನೂ ಕೊಯ್ದ. ಇದೇ ದಾರಿಯಲ್ಲಿ ಬಾಲ್ಯದ ರಜಾ ದಿನಗಳಲ್ಲಿ ಮಾವನ ಜೊತೆ ಹುಲ್ಲು ಕೊಯ್ಯಲು ತೆರಳುತ್ತಿದ್ದು ನೆನಪಾಯಿತು. ಮುಂಜಾನೆ ಹಟ್ಟಿಯ ಐದಾರು ದನಗಳನ್ನು ಮೇಯಲು ಇಲ್ಲೀ ತನಕ ತಂದು ಬಿಡುತ್ತಿದ್ದ. ಸಂಜೆಗೆ ಅವುಗಳನ್ನು ಮತ್ತೆ ಹಟ್ಟಿಗೆ ತರಲೂ ಮಾವನಿಗಿಂತಲೂ ನಾಲ್ಕು ಹೆಜ್ಜೆ ಮುಂದಿಡುತ್ತಿದ್ದ ಅರವಿಂದ. (ದನಗಳ್ಯಾರು ಆ ದಿನಗಳಲ್ಲಿ ಇದ್ದಿರಲಿಲ್ಲ.) ಈ ಮಾವನ ಜೊತೆಯಲ್ಲಿ ಅಜ್ಜಿ ಮನೆಯಲ್ಲಿ ಎಲ್ಲದಕ್ಕೂ ಒಂಥರಾ ಸಲುಗೆ, ಸ್ವಾತಂತ್ರ್ಯವಿತ್ತು. ಆ ಸುಂದರ ನಿಸರ್ಗದ ಮಡಿಲಲ್ಲಿ ಮಾವ ಯಾವ ಚಿಕ್ಕ ಕೆಲಸ ಹೇಳಿದರೂ ನಲಿದು ಜಿಗಿದು ಹುಮ್ಮಸ್ಸಿನಿಂದ ಮಾಡುತ್ತಿದ್ದ ಆ ಸಂಭ್ರಮದ ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳುತ್ತಾ ಅರವಿಂದನಿಗೆ ಕಣ್ಣಂಚಿನಲ್ಲಿ ಸ್ವಲ್ಪ ನೀರು ಜಿನುಗಿತು.

ಅಲ್ಲೇ ಪಕ್ಕದಲ್ಲಿ ಒಕ್ಕಲಿನವ ರಾಮಪ್ಪನ ಮನೆ. ಅಜ್ಜನ ಕಾಲದಲ್ಲಿ ರಾಮಪ್ಪನ ಅಪ್ಪನಿಗೆ ಹತ್ತು ಸೆಂಟ್ಸ್ ಜಾಗ ನೀಡಲಾಗಿತ್ತು. ಈಗ ಅಲ್ಲಿ ಎರಡು ಮೂರು ಮನೆಗಳಾಗಿವೆ. ರಾಮಪ್ಪನ ತಂದೆ ತೀರಿ ಇಪ್ಪತ್ತು ವರ್ಷಗಳು ಕಳೆದಿತ್ತು. ಅಡಿಕೆ ಕೊಯ್ಯಲು, ತೆಂಗಿನ ಕಾಯಿ ಕೊಯ್ಯಲು, ಗದ್ದೆ ಕೆಲಸಗಳಿಗೆ ರಾಮಪ್ಪನೇ ಬೇಕು. ಕಳೆದ ತಿಂಗಳು ರಾಮಪ್ಪನೂ ಸತ್ತದ್ದನ್ನು ಮೋಹನ ಹೇಳಿದ. ಅಜ್ಜಿಯ ಮನೆಗೆ ಬಂದಾಗಲೆಲ್ಲ ರಾಮಪ್ಪನ ಮನೆಗೂ ಹೋಗಿ ಬರುತ್ತಿದ್ದ ಅರವಿಂದ. ಮಾವ ಕೆಲವೊಮ್ಮೆ ಮಾತಿನ ನಡುವೆ ರಾಮಪ್ಪನ ತಂದೆಗೆ ಅಜ್ಜ ಹತ್ತು ಸೆಂಟ್ಸ್ ಜಾಗ ನೀಡಿದ್ದಕ್ಕೆ ಕೋಪದಿಂದ ಬೈದದ್ದಿದೆ. "ಹತ್ತು ಸೆಂಟ್ಸ್ ಯಾಕೆ ಕೊಡಬೇಕಿತ್ತು? ಐದು ಸೆಂಟ್ಸ್ ಕೊಟ್ಟಿದ್ದರೆ ಏನಾಗುತ್ತಿತ್ತು ಈ ಅಜ್ಜನಿಗೆ....? ಎನ್ನುವುದು ಅವರ ವಾದವಾಗಿತ್ತು.

ಬೈಕ್ನ ಸದ್ದು ಕೇಳಿ ಶ್ರೀಪತಿ ಮಾವ ದೂರದಲ್ಲಿದ್ದವರು ಮನೆ ಅಂಗಳದತ್ತ ಬಂದರು. 'ಓಹ್, ಬಂದಿಯಾ ಅರವಿಂದ... ಮೊದಲು ಊಟ ಮಾಡಿ. ಇಬ್ಬರೂ ಕೈಕಾಲು ತೊಳೆದು ಬನ್ನಿರಿ' ಎನ್ನುತ್ತಾ ಒಳಹೋಗಿ ಅತ್ತೆಗೆ ಸುದ್ದಿ ಮುಟ್ಟಿಸಿದರು. ಊಟ ಮಾಡಿದ ನಂತರ ತನಗೆ ಬೇರೆ ಕೆಲಸವಿದೆ ಅಂದ ಮೋಹನ ಬೈಕ್ ಜೊತೆ ಹೊರಟ.

ಅರವಿಂದ, 'ನಾನು ಇವತ್ತು ಇಲ್ಲೇ ಇರ್ತೇನೆ ಮಾವ, ನಾಳೆ ಬೆಳಿಗ್ಗೆ ಹೊರಡುವೆ. ನನಗೆ ಇಲ್ಲಿ ಎಲ್ಲಾ ಕಡೆ ಸುತ್ತಾಡಿ ಬರಬೇಕು' ಎನ್ನುತ್ತಾ ತಾನು ಅಂದು ರಾತ್ರಿ ಅಲ್ಲೇ ಉಳಿದುಕೊಳ್ಳುವ ಸೂಚನೆ ನೀಡಿದ. ಶ್ರೀಪತಿ ಮಾವನಿಗಂತೂ ತುಂಬಾ ಖುಷಿಯಾಯಿತು.

ಸಂಜೆ ಶ್ರೀಪತಿ ಮಾವನ ಜೊತೆ ಅರವಿಂದ ಗುಡ್ಡದತ್ತ ತಿರುಗಾಡಲು ಹೊರಟ. ಅಲ್ಲೇ ಭೂತದ ಗುಡಿ ಇರುವುದು. ಗುಡಿಯೊಳಗೆ ಒಂದು ಕಲ್ಲು ಮಾತ್ರ. ಪ್ರತೀವರ್ಷ ಒಂದು ಬಾರಿ ಮಾತ್ರ ಅದರ ಬಾಗಿಲು ತೆರೆದು ಮಡಲಿನ ಸೂಟೆಯಲ್ಲಿ ಆರತಿ ಮಾಡುತ್ತಾರೆ. ಆವಾಗ ಕುಟುಂಬದವರೆಲ್ಲಾ ಬರುತ್ತಾರೆ. ಶ್ರೀಪತಿ ಮಾವನೇ ಅದರ ಜವಾಬ್ದಾರಿ. ಗುಡಿಯೊಳಗೆ ಹೋಗಿ ಅವರು ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ಖತಾಯಚಾ... ಶ್ಲೋಕ ಹೇಳುತ್ತಿದ್ದರು. ಈ ಭೂತಕ್ಕೂ ರಾಘವೇಂದ್ರರಿಗೂ ಏನು ಸಂಬಂಧ ಎಂದು ಬಾಲ್ಯದಲ್ಲಿ ಅರವಿಂದನ ಸಹಿತ ಇತರ ಮಕ್ಕಳೂ ಸೇರಿ ಮುಸಿಮುಸಿ ನಗುತ್ತಿದ್ದುದನ್ನು ಆ ಕ್ಷಣಕ್ಕೆ ನೆನಪಿಸಿಕೊಂಡು ಮುಗುಳ್ನಕ್ಕ. ಒಂದು ರೀತಿಯಲ್ಲಿ ಶ್ರೀಪತಿ ಮಾವ ದೇವರನ್ನು ಕೈಮುಗಿಯುತ್ತಿದ್ದರೂ ಒಳಗೆ ನಾಸ್ತಿಕನಂತೆಯೇ ಅರವಿಂದನಿಗೆ ಕಾಣುತ್ತಿದ್ದರು.

ಗುಡ್ಡದಲ್ಲಿ ಇಬ್ಬರೂ ಒಂದಷ್ಟು ಹೊತ್ತು ಕೂತರು. ಶ್ರೀಪತಿ ಮಾವನಿಗೆ ಮಾತನಾಡಲು ಇದ್ದುದು ಆಸ್ತಿ ಇನ್ನೂ ಪಾಲಾಗದಿರುವ ಬಗ್ಗೆ. ಒಂಭತ್ತು ಜನರಿಗೆ ಈ ಆಸ್ತಿ, ಸಂಪತ್ತು ಪಾಲು ಮಾಡಿಕೊಳ್ಳಬೇಕಾಗಿದೆ. ಇನ್ನುಳಿದ ಮಾವಂದಿರು 'ಹೆಣ್ಣು ಮಕ್ಕಳಿಗೆ ಗದ್ದೆಯನ್ನು ಕೊಡುವುದು ಬೇಡ. ಅವರ ಗಂಡಂದಿರು ನಾಳೆಯ ದಿನ ಬೇರೆ ಕಡೆ ಹೋದರೆ ಈ ಗದ್ದೆ ಮಾರಲೂ ಬಹುದು. ಆವಾಗ ನಮಗೆ ತೊಂದರೆಯಾಗುವ ಸಾಧ್ಯತೆಗಳಿವೆ. ಅವರಿಗೆ ಕಾಡು ಅಥವಾ ಗುಡ್ಡವನ್ನು ಪಾಲು ಮಾಡೋಣ' ಎಂದಿದ್ದಾರೆ. ಆದರೆ ಹೆಣ್ಣು ಮಕ್ಕಳು ಅದಕ್ಕೆ ಒಪ್ಪುತ್ತಿಲ್ಲ. ನಿನ್ನ ಅಮ್ಮ ಮಾತ್ರ 'ಏನೇ ಸಿಗಲಿ, ಅದು ಹಿರಿಯರ ಪ್ರಸಾದ' ಅಂದಿದ್ದಾಳೆ. ಬಾಕಿಯವರು ಒಪ್ಪುತ್ತಿಲ್ಲ. ಯಾರೂ ಊರಿನ ಮನೆಯಲ್ಲಿ ನಿಲ್ಲದಿದ್ದಾಗ ನಾನು ಕಾಲೇಜ್ ಬಿಟ್ಟು ನಿಂತಿದ್ದೆ. ಇದೆಲ್ಲಾ ಅಡಿಕೆ ಮರ ನನ್ನ ಶ್ರಮದ ಫಲ. ಅದರಲ್ಲೂ ಈಗ ಪಾಲು ಬೇಕಂತೆ. ಎಷ್ಟು ವರ್ಷದಿಂದ ಇದು ಹೀಗೆಯೇ ಇರೋದು? ಯಾರಾದರೂ ಒಳ್ಳೆಯ ಲಾಯರ್ನನ್ನು ಹಿಡೀಬೇಕು. ನಿನಗೆ ಪರಿಚಯದವರು ಇದ್ದರೆ ಹೇಳು. ಯಾರಿಗೂ ಅದು ಗೊತ್ತಾಗಬಾರದು.....' ಹೇಳುತ್ತಿರುವಂತೆ ಶ್ರೀಪತಿ ಮಾವನ ಮುಖದಲ್ಲಿ ವಿಷಾದದ ಛಾಯೆ ಆವರಿಸಿತ್ತು. 'ನೀನು ಸ್ವಲ್ಪ ಮಾತಾಡಿದರೆ ಏನಾದರೂ ಆಗಬಹುದೋ ಏನೋ ಅರವಿಂದ....' ಎಂದು ಪ್ರಶ್ನಾರ್ಥಕವಾಗಿ ಅರವಿಂದನ ಮುಖವನ್ನೇ ನೋಡತೊಡಗಿದರು.

'ನೋಡೋಣ ಮಾವ, ನಾನೂ ಒಮ್ಮೆ ಉಳಿದವರಲ್ಲಿ ಮಾತನಾಡಿ ಅವರವರ ಅಭಿಪ್ರಾಯಗಳನ್ನು ತಿಳಿಯುತ್ತೇನೆ. ನಂತರ ಏನಾದರೂ ಒಂದು ತೀಮರ್ಾನಕ್ಕೆ ಬರೋಣ.... ಅಷ್ಟು ಸುಲಭದಲ್ಲಿ ಇತರರು ಒಪ್ಪೋದು ಕಷ್ಟ' ಎಂದು ಅರವಿಂದ ಉತ್ತರಿಸಿದ. ಅವನಿಗೂ ಮಾತುಕತೆ ಫಲಿತಾಂಶ ನೀಡುವ ಬಗ್ಗೆ ಅನುಮಾನವೇ ಇದೆ.

ಯಾಕೆಂದರೆ ತನ್ನ ಅಪ್ಪನ ಅಪ್ಪ ತನ್ನ ತಾತ ಬದುಕಿದ್ದಾಗ ಅಜ್ಜಿ ಮನೆಯ ಎಲ್ಲಾ ಮಾವಂದಿರೂ ಆಸ್ತಿ ಪಾಲಿನ ಬಗ್ಗೆ ಎರಡು ದಿನ ತಮ್ಮ ಮನೆಯಲ್ಲಿ ಕೂತು ಚರ್ಚೆ ನಡೆಸಿದ್ದರು. ಅರವಿಂದನ ತಾತ ಆಗ ದಸ್ತಾವೇಜು ಬರಹಗಾರರಾಗಿದ್ದರು. ಅಮ್ಮನಿಗೂ ಒಂದು ಆಸೆ ಇತ್ತು. ಜಗಳ, ತಕರಾರಿಲ್ಲದೆ ಇವರು ಪಾಲು ಮಾಡಿಕೊಂಡರೆ ನೆಮ್ಮದಿ ಎಂದು. ಎರಡಲ್ಲ, ನಾಲ್ಕು ದಿನ ಕುಳಿತರೂ ತನ್ನ ತಾತನಿಂದ ಇವರ ಆಸ್ತಿ ಪಾಲು ಇತ್ಯರ್ಥ ಮಾಡಲು ಸಾಧ್ಯವಾಗಿರಲಿಲ್ಲ. ಮಾವಂದಿರು ತಮ್ಮ ಹಠ ಬಿಡಲು ಒಪ್ಪಲೇ ಇಲ್ಲ.

ಎಂತೆಂತಹ ಆಸ್ತಿಗಳ ವಿವಾದವನ್ನು ತನ್ನ ತಾತ ಸೌಹಾರ್ದವಾಗಿ ಇತ್ಯರ್ಥಗೊಳಿಸಿದ್ದರೂ ಮಾವಂದಿರ ಆಸ್ತಿಯ ಪಾಲಿನ ವಿಷಯದಲ್ಲಿ ಮಾತ್ರ ತಾತನೂ ಸೋತು ಹೋಗಿದ್ದರು. ಅವರ ಸಲಹೆಯನ್ನು ಮಾವಂದಿರು ಒಪ್ಪಲೇ ಇಲ್ಲ. ಆಗಿದ್ದರೆ ಇಪ್ಪತ್ತು ವರ್ಷಗಳ ಹಿಂದೆಯೇ ಇದಕ್ಕೊಂದು ಅಂತ್ಯ ಕಾಣುತ್ತಿತ್ತು ಎಂದು ಮನದಲ್ಲೇ ಅಂದುಕೊಂಡ ಅರವಿಂದ. ಅಂದು ಮಾವಂದಿರು ಹೊರಡುವಾಗ ತಾತ ತನ್ನ ಒಂದು ಆಸ್ತಿಯ ಕತೆಯನ್ನು ಹೇಳಿದ್ದರು. ಮಾವಂದಿರು ಕೇಳಿಸಿಕೊಂಡಿದ್ದರು. ಈವಾಗ ಮತ್ತೆ ಆ ಕತೆ ಅರವಿಂದನನ್ನು ಕಾಡಿಸಿತು.

* * *